**ಧಾರಾವಾಹಿ ಲೇಖನ**

# ರಾಮಕೃಷ್ಣ ಮಹಾಸಂಘದ ಗುರುಪರಂಪರೆ

ಮೀನಾ

## ಹಿನ್ನೆಲೆ

ಭಕ್ತ ನವಗೋಪಾಲ ಘೋಷರ ಹೊಸ ಮನೆಯ ದೇವರ ಮನೆಯಲ್ಲಿ ಸುಂದರವಾಗಿ ಅಲಂಕರಿಸಲ್ಪಟ್ಟ ಶ್ರೀಗುರುದೇವರ ಭಾವಚಿತ್ರ ವೆದುರು ಕುಳಿತು ಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದಾರೆ, ಪೂಜ್ಯ ಸ್ವಾಮಿ ವಿವೇಕಾನಂದರು. ಆಗ ಅವರ ದಿವ್ಯಚಿತ್ತದಲ್ಲಿ ತಮ್ಮ ಶ್ರೀಗುರುದೇವರನ್ನು ಕುರಿತು ಒಂದು ನಮನ ಶ್ಲೋಕ ತಾನಾಗಿಯೇ ಹೊರಬಂದಿತು.

**ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮ ಸ್ವರೂಪಿಣೇ ।**
**ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥**

"ಧರ್ಮವನ್ನು ಸ್ಥಾಪಿಸಿದವನೂ, ಸರ್ವಧರ್ಮಸ್ವರೂಪನೂ, ಅವತಾರ ವರಿಷ್ಠನೂ ಆದ ಶ್ರೀರಾಮಕೃಷ್ಣರನ್ನು ನಮಿಸುತ್ತೇನೆ."

ಧರ್ಮಸಂಸ್ಥಾಪನೆಯ ಕಾರ್ಯವನ್ನು ಮಾಡಬಲ್ಲವನು ಸ್ವಯಂ ಭಗವಂತನೇ. ಅವತಾರಪುರುಷರ ಆಗಮನವು ಸಾಧುಗಳ ರಕ್ಷಣೆ, ಭಕ್ತರಿಗೆ ಮೋಕ್ಷಪ್ರದಾನ ಮತ್ತು ಅವರಿಗೆ ಭಗವಂತನ ಬಳಿ ಸೇರಲು ಸುಲಭವಾದ ಉಪಾಯವನ್ನು ತೋರಿಸಿಕೊಡುವುದೇ ಆಗಿದೆ. ಭಗವನ್ಮುಖಿವಾಗಿ ಸಾಗುವ ಯೋಗವಿದ್ಯೆಯನ್ನು ಭಗವಂತನೇ ಜಗತ್ತಿಗೆ ಬೋಧಿಸುತ್ತಾನೆ. ಈ ಯೋಗವಿದ್ಯೆಯು ಪರಂಪರಾಗತವಾಗಿ ಭಕ್ತರೆಲ್ಲರಿಗೂ ಮುಟ್ಟುತ್ತದೆ. ಹೀಗೆ ಭಗವಂತನ ಶಕ್ತಿಯು ಹರಿದು ಬರಬೇಕಾದರೆ, ಶ್ರೀಗುರುಪರಂಪರೆ ಬಹು ಮುಖ್ಯ. ಆಚಾರ್ಯ ಶಂಕರರ ದಿವ್ಯ ಜೀವನ ಮತ್ತು ಸಂದೇಶಗಳನ್ನು ಅವರು ಸ್ಥಾಪಿಸಿದ ನಾಲ್ಕು ಮಠಗಳು ಇಂದಿಗೂ ಪ್ರಸಾರ ಮಾಡುತ್ತಿವೆ. ಅದೇ ರೀತಿ ಶ್ರೀರಾಮಕೃಷ್ಣ ಮಹಾಸಂಘವೂ ಕೂಡ ತನ್ನದೇ ಆದ ಗುರುಪರಂಪರೆಯನ್ನು ಹೊಂದಿ ಅದರ ಮೂಲಕ ಭಗವಾನ್ ಶ್ರೀರಾಮಕೃಷ್ಣರ ಅಮೃತ ಸಂದೇಶವನ್ನು ಜನಮನಗಳಿಗೆ ಮುಟ್ಟಿಸಿ ಅವರನ್ನು ಪುನೀತಗೊಳಿಸುತ್ತಿದೆ. ಇದರಿಂದಾಗಿ ಬಹು ಜನರ ಆಧ್ಯಾತ್ಮಿಕ ಉನ್ನತಿ ಮತ್ತು ಆ ಮೂಲಕ ಜಗತ್ತಿನ ಹಿತ ಸಾಧಿತವಾಗುತ್ತಿದೆ.

ಸುರನದಿಯಾದ ಗಂಗೆಯು ಭುವಿಗೆ ಇಳಿದುಬಂದಂತೆ, ಗುರುಶಕ್ತಿಯು ಸರ್ವರ ಒಳಿತಿಗಾಗಿ ಪರಂಪರೆಯ ಮೂಲಕ ಹರಿದು ಬರುತ್ತದೆ. ಶ್ರೀರಾಮಕೃಷ್ಣ ಭಾವಧಾರೆಯು ಶ್ರೀರಾಮಕೃಷ್ಣ ಶಾರದಾದೇವಿಯರ ಪಾದ ತಲದಿಂದ ಉದ್ಭವಿಸಿ, ಶಿವಸ್ವರೂಪರಾದ ಸ್ವಾಮಿ ವಿವೇಕಾನಂದರ ಶಿರಸ್ಸನ್ನು ಅಲಂಕರಿಸಿ, ಅನಂತರ ಅನೇಕಾನೇಕ ಭಗೀರಥಸದೃಶ ಶ್ರೀಗುರುಗಳ ತಪಸ್ಸು ಪ್ರಾರ್ಥನೆಗಳಿಗೆ ಕೃಪೆ ಮಾಡಿ, ಇಂದಿಗೂ ಹರಿದು ಬರುತ್ತಿದ್ದಾಳೆ, ಮುಂದೆಯೂ ಹರಿದು ಬರುತ್ತಾಳೆ. ಇದಕ್ಕಾಗಿಯೇ ಈ ಮಹಾಸಂಘಕ್ಕೆ ಒಂದು ಗುರುಪರಂಪರೆ ಇರುವುದು. ಇಲ್ಲದಿದ್ದರೆ, ಶ್ರೀರಾಮಕೃಷ್ಣರು ಈ ಭುವಿಗೆ ಕೊಟ್ಟ ಆಧ್ಯಾತ್ಮಿಕ ಸಂಪತ್ತು ನಷ್ಟವಾಗುವ ಸಂಭವ ಇದೆ.

*ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಇವರ ಅನೇಕ ಲೇಖನಗಳು ವಿವೇಕಪ್ರಭದಲ್ಲಿ ಪ್ರಕಟವಾಗಿವೆ.*

ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರನ್ನು 'ಸಂಘಗುರು' ಎಂದು ಹೆಸರಿಸುವುದು ರೂಢಿ. ಅವರಲ್ಲಿ ಮೊದಲನೆಯವರು ಸ್ವಾಮಿ ಬ್ರಹ್ಮಾನಂದಜಿ ಅವರು. ಅವರಿಂದ ಹಿಡಿದು ಇದುವರೆಗೂ ೧೫ ಮಂದಿ ಈ ಪದವಿಯನ್ನು ಅಲಂಕರಿಸಿದ್ದಾರೆ. ಅವರೆಲ್ಲರ ದಿವ್ಯ ವ್ಯಕ್ತಿತ್ವದ ಸೂಕ್ಷ್ಮ ಪರಿಚಯ ಮಾಡಿಕೊಳ್ಳೋಣ.

## ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್

ಇವರು ಶ್ರೀರಾಮಕೃಷ್ಣರ ಮಾನಸಪುತ್ರರು. ಪೂಜ್ಯ ಸ್ವಾಮಿ ವಿವೇಕಾನಂದರೇ ಅವರನ್ನು ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರನ್ನಾಗಿ ಮಾಡಿದರು. ಬ್ರಹ್ಮಾನಂದಜಿ ಅವರು ಸಂಘವನ್ನು ನಡೆಸುತ್ತಿದ್ದ ರೀತಿಯು ಭಗವತ್ ಶಕ್ತಿಯಿಂದ ಮತ್ತು ಮಾನವ ಪ್ರೇಮದಿಂದ ಕೂಡಿತ್ತು. ಅವರ ಬಳಿಗೆ ಯಾರೇ ಬರಲಿ, ಒಂದು ಅಲೌಕಿಕ ಶಾಂತಿ ಸಮಾಧಾನಗಳ ನೆಲೆಯನ್ನು ಮುಟ್ಟುತ್ತಿದ್ದರು. ಒಮ್ಮೆ ವಾರಾಣಸಿ ಸೇವಾಶ್ರಮದಲ್ಲಿ ಸಾಧುಗಳ ನಡುವೆ ಗೊಂದಲವಾಯಿತು.



ಆಗ ಪೂಜ್ಯ ಸ್ವಾಮೀಜಿಯವರು ಅಲ್ಲಿಗೆ ಆಗಮಿಸಿದರು. ಆದರೆ, ಯಾವ ಉಪದೇಶವನ್ನೂ ನೀಡಲಿಲ್ಲ, ಸಾಧುಗಳ ತಪ್ಪನ್ನೂ ಎತ್ತಿ ತೋರಿಸಲಿಲ್ಲ. ಅದಕ್ಕೆ ಬದಲಾಗಿ ಪ್ರೀತಿಯಿಂದ ಅವರೆಲ್ಲರನ್ನೂ ಒಟ್ಟಿಗೆ ಸೇರಿಸಿ, ಬೆಳಗ್ಗೆ, ಸಂಜೆ ಧ್ಯಾನ ಜಪ ಶಾಸ್ತ್ರಾಲೋಚನೆಗಳಲ್ಲಿ ಮಗ್ನರಾಗುವಂತೆ ಮಾಡಿದರು. ಇದರಿಂದಾಗಿ ಅಲ್ಲಿ ಪರಸ್ಪರರಲ್ಲಿದ್ದ ವೈಷಮ್ಯ ಕಳೆದು ಪ್ರತಿಯೊಬ್ಬರೂ ತಮ್ಮ ತಮ್ಮ ಸೇವಾಕಾರ್ಯದಲ್ಲಿ ಮಗ್ನರಾದರು.

ಸುಮಾರು ೨೧ ವರ್ಷಗಳ ಕಾಲ ಅಧ್ಯಕ್ಷ ಪದವಿಯಲ್ಲಿದ್ದ ಸ್ವಾಮಿ ಬ್ರಹ್ಮಾನಂದಜಿ ಅವರು ಭಗವದುಪಾಸನೆ ಮತ್ತು ನಿಷ್ಕಾಮ ಕರ್ಮಗಳ ಸಮನ್ವಯಮೂರ್ತಿಯಾಗಿದ್ದರು. "ತಾಮಸಿಕತೆ ಮಹಾಶತ್ರು; ಕೈಗಳು ಕರ್ಮ ಮಾಡುತ್ತಾ ಇರಬೇಕು, ಮನಸ್ಸು ಭಗವಂತನನ್ನು ಚಿಂತಿಸುತ್ತ ಇರಬೇಕು" ಎಂದು ಅವರು ಯಾವಾಗಲೂ ಹೇಳುತ್ತಿದ್ದರು. **ಆಧ್ಯಾತ್ಮಿಕ ಸಾಧನೆ** ಮತ್ತು **ಲೋಕಕಲ್ಯಾಣ ಕಾರ್ಯ**ಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ಸ್ವಾಮಿಗಳು ತೊಡಗಿಸಿಕೊಂಡಿದ್ದರು. **ಭಗವದಾಲಂಬನ, ನಿಸ್ವಾರ್ಥ ಸೇವೆ** – ಇವೆರಡೂ ನವಯುಗದ ಸಾಧನೆಗಳು ಎಂದು ಸಾಧುಗಳಿಗೆ ಹೇಳುತ್ತ ಅವರನ್ನು ಹುರಿದುಂಬಿಸುತ್ತಿದ್ದರು.

ಒಮ್ಮೆ ಹೊಸದಾಗಿ ಸಂನ್ಯಾಸ ಸ್ವೀಕರಿಸಿದ ಓರ್ವ ಸಾಧು ಸ್ವಾಮಿ ಬ್ರಹ್ಮಾನಂದಜಿ ಅವರನ್ನು ಈ ರೀತಿ ಪ್ರಶ್ನಿಸಿದರು: "ಮಹಾರಾಜ್, ನಮ್ಮ ಸಂಘದ ಕಾರ್ಯಕೆಲಸಗಳು ಶಾಸ್ತ್ರೋಕ್ತ ಸಾಧನೆಯ ವಿರುದ್ಧವಲ್ಲವೇ? " ಅದನ್ನು ಆಲಿಸಿದ ಸ್ವಾಮಿಗಳು, " ಸ್ವಾಮಿ ವಿವೇಕಾನಂದರ ಬಗೆಗೆ ಕೃತಘ್ನನಾಗಬೇಡ. ಅವರು ಈ ಮಹಾಸಂಘಕ್ಕಾಗಿ, ನಮ್ಮ ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದರು. ನರನಾರಾಯಣರ ಸೇವೆಯಲ್ಲಿ ನಿನ್ನನ್ನು ತೊಡಗಿಸಿಕೋ. ನೀನು ಸಾಧು. ಪರಾರ್ಥಕ್ಕಾಗಿಯೇ ನಿನ್ನ ಜೀವನ. ಸಾಧನೆಯ ಪಥದಲ್ಲಿ ಮನಸ್ಸಿನ ಕೆಟ್ಟ ಸಂಸ್ಕಾರಗಳೇ ಪ್ರಧಾನ ವಿಘ್ನವೇ ಹೊರತು ಕೆಲಸವಲ್ಲವೇ ಅಲ್ಲ. ಭಗವಂತನ ಸೇವೆ ಮಾಡುತ್ತ,

ಈ ಶರೀರ ಬೀಳಲಿ. ನೂರಾರು ಜೀವಮಾನಗಳನ್ನು ನೀನು ಸ್ವಾರ್ಥ ಸಾಧನೆಗಾಗಿ ವ್ಯಯ ಮಾಡಲಿಲ್ಲವೇ? ನಿಸ್ವಾರ್ಥ ಬುದ್ಧಿಯಿಂದ ಭಗವಂತನ ಕೆಲಸ ಮಾಡಿದರೆ, ಚಿತ್ತಶುದ್ಧಿಯಾಗುತ್ತದೆ. ಆಗ ಬೇಗನೇ ಮನಸ್ಸು ಭಗವಂತನ ಕಡೆಗೆ ಹರಿಯುತ್ತದೆ" ಎಂದರು.

ರಾಮಕೃಷ್ಣ ಮಹಾಸಂಘದ ಪ್ರೇರಣಾಶಕ್ತಿ ಸ್ವಾಮಿ ವಿವೇಕಾನಂದರಾದರೆ, ಅದರ ವಿಕಾಸಕರ್ತರು ಸ್ವಾಮಿ ಬ್ರಹ್ಮಾನಂದರು. ಅವರೆಡೆಗೆ ಬಂದ ಜಿಜ್ಞಾಸುಗಳಿಗೆ ಅವರು ಪರಮಲೋಕದ ಸಂದರ್ಶನದ ಅನುಭವ ಮಾಡಿಸುತ್ತಿದ್ದರು. ಅವರ ಜೀವನ ಅತ್ಯಂತ ಮಾಧುರ್ಯಮಯವೂ, ಸೇವಾಪೂರ್ಣವೂ, ತಪೋದೀಪ್ತವೂ ಆಗಿತ್ತು.

### ಸ್ವಾಮಿ ಶಿವಾನಂದಜಿ ಮಹಾರಾಜ್



ರಾಮಕೃಷ್ಣ ಮಹಾಸಂಘದ ದ್ವಿತೀಯ ಸಂಘಗುರುಗಳಾದ ಸ್ವಾಮಿ ಶಿವಾನಂದಜಿ ಮಹಾರಾಜ್ ಅವರು ಚಿಕ್ಕಂದಿನಿಂದಲೂ ಅತೀವ ವೈರಾಗ್ಯ ಸಂಪನ್ನರಾಗಿದ್ದರು. ಅವರ ಹೃದಯ ವೈರಾಗ್ಯ, ಕರುಣೆಗಳ ಆಗರವಾಗಿತ್ತು. ಅವರನ್ನು ಸ್ವಾಮಿ ವಿವೇಕಾನಂದರೇ 'ಮಹಾಪುರುಷ್' ಎಂದು ಕರೆಯುತ್ತಿದ್ದರು.

ಹೊರನೋಟಕ್ಕೆ ತೀವ್ರ ಶಿಸ್ತಿನ ವ್ಯಕ್ತಿಯಾಗಿದ್ದರೂ ತಾಯಿಯಂತಹ ಕೋಮಲ ಹೃದಯ ಅವರದು. ಯಾರಾದರೂ ಸಾಧುಬ್ರಹ್ಮಚಾರಿಗಳಿಗೆ ಅನಾರೋಗ್ಯವುಂಟಾದರೆ ತಾವೇ ಸ್ವತಃ ಸೇವೆ ಸಲ್ಲಿಸುತ್ತಿದ್ದರು. ಇದು ಅವರ ಜೀವನದ ಕೊನೆಯವರೆಗೂ ಕಂಡು ಬರುತ್ತಿದ್ದ ವಿಶೇಷಗುಣ. ಒಮ್ಮೆ ಒಬ್ಬ ಬ್ರಹ್ಮಚಾರಿಗಳು ಅನಾರೋಗ್ಯದಿಂದ ಉಂಟಾದ ನಿಶ್ಶಕ್ತಿಯಿಂದ, ಹಾಸಿಗೆ ಒದ್ದೆ ಮಾಡಿಕೊಂಡಿದ್ದರಂತೆ. ಸ್ವಾಮಿ ಶಿವಾನಂದಜಿ ಅವರು ಅದನ್ನು ತೆಗೆದು ಹೊಸಬಟ್ಟೆ ಹಾಕಿ, ತಾವೇ ಶುಚಿಗೊಳಿಸಿದರಂತೆ. ಇಂತಹ ಮಾತೃಹೃದಯದ ಅಮೃತಸಿಂಚನದಿಂದಲೇ ಅವರು ಮುಂದೆ ಸಂಘವನ್ನು ತಾಯಿಯಂತೆ ಪರಿಪಾಲನೆ ಮಾಡಿದ್ದು.

ಸ್ವಾಮಿ ಶಿವಾನಂದರಲ್ಲಿ ಆಧ್ಯಾತ್ಮಿಕತೆಯ ದೂರದೃಷ್ಟಿ ಬಹುವಾಗಿ ಪ್ರಕಾಶ ಹೊಂದಿತ್ತು. ೧೯೨೬ ರಲ್ಲಿ ವೈದ್ಯನಾಥ ಧಾಮದಲ್ಲಿ ಮಿಷನ್ನಿನ ನೂತನ ಕಟ್ಟಡ ಉದ್ಘಾಟನೆಯಾಯಿತು. ಆಶ್ರಮದ ಬ್ರಹ್ಮಚಾರಿಯೊಬ್ಬರಿಗೆ ಆ ಉತ್ಸವವನ್ನು ನೋಡಲಾಗಲಿಲ್ಲ. ಅವರು ಯಾವುದೋ ಕೆಲಸದಲ್ಲಿ ಮಗ್ನರಾಗಿದ್ದರು. ಭಾವಾವಸ್ಥೆಯಲ್ಲಿದ್ದ ಸ್ವಾಮಿ ಶಿವಾನಂದಜಿ ಅವರು ಆತನ ಬಳಿಗೆ ಹೋಗಿ, ತಲೆ ನೇವರಿಸಿ ಆಶೀರ್ವದಿಸಿ ಹೀಗೆ ಹೇಳಿದರು: "ನೋಡು, ಈ ಸ್ಥಾನದಲ್ಲಿ ನಾನು ಬಹು ದೊಡ್ಡ ಶಕ್ತಿಯ ವಿಕಾಸವನ್ನು ಕಾಣುತ್ತಿದ್ದೇನೆ. ನಿನ್ನಿಂದ ಬಹು ದೊಡ್ಡ ಕೆಲಸಕಾರ್ಯಗಳು ಭಗವದಿಚ್ಛೆಯಿಂದ ಸಾಧಿತವಾಗುತ್ತವೆ." ಅದು ಮುಂದೆ ಅಕ್ಷರಶಃ ಸತ್ಯವಾಯಿತು.

ವಿವಿಧ ಸ್ಥಳಗಳಲ್ಲಿ ಮಠಸ್ಥಾಪನೆ, ದುರ್ಭಿಕ್ಷ ಪೀಡಿತರ ಸೇವೆ, ವೇದಾಂತ ಹಾಗೂ ಶ್ರೀರಾಮಕೃಷ್ಣರ ಸಂದೇಶಪ್ರಸಾರ ಮತ್ತು ತೀವ್ರವಾದ ಸಾಧನೆ ಭಜನೆಗಳಲ್ಲಿ ಸ್ವಾಮಿ ಶಿವಾನಂದರು ತಲ್ಲೀನರಾಗಿರುತ್ತಿದ್ದರು. ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಮೇಲೆ ಅವರ ಅಂತರಂಗದ ಪ್ರೀತಿ ನೂರು ದಿಕ್ಕುಗಳಲ್ಲಿ ಹರಿಯಲಾರಂಭಿಸಿತು. ಮಠದ ಪ್ರತಿಯೊಂದು ಕಾರ್ಯದಲ್ಲಿಯೂ ಅವರಿಗೆ ನಿಗಾ ಇತ್ತು. ತೋಟದ ಮಾಲಿ, ಗೋಶಾಲೆಯ ಗೋವುಗಳು, ಪಶುಪಕ್ಷಿ, ಭಿಕ್ಷುಕರು – ಎಲ್ಲರೂ ಅವರ ಪ್ರೀತಿಗೆ ಪಾತ್ರರಾಗಿದ್ದರು. ಒಟ್ಟಿನಲ್ಲಿ ತಾಯಿ, ತಂದೆ, ಗುರು, ಸಖ – ಇವರೆಲ್ಲರ ಗುಣಗಳೂ ಮಹಾಪುರುಷ ಸ್ವಾಮಿ ಶಿವಾನಂದಜಿ ಅವರಲ್ಲಿ ಒಂದಾಗಿ ಅವರನ್ನು ಓರ್ವ ಮಹಾನ್ ಗುರುವನ್ನಾಗಿ ರೂಪುಗೊಳಿಸಿತ್ತು.

### ಸ್ವಾಮಿ ಅಖಂಡಾನಂದಜಿ ಮಹಾರಾಜ್

ಸ್ವಾಮಿ ಅಖಂಡಾನಂದಜಿ ಮಹಾರಾಜ್, ವಿವೇಕಾನಂದರು ನಿರ್ದೇಶಿಸಿದ ರೀತಿಯಲ್ಲಿ, ತಮ್ಮ ಇಡೀ ಜೀವನವನ್ನು ಅನಾಥ ಮಕ್ಕಳ ಸೇವೆಯಲ್ಲಿ ತೊಡಗಿಸಿಕೊಂಡವರು. ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಸಾರಗಾಛಿಯಲ್ಲಿ ಅನಾಥ ಆಶ್ರಮವನ್ನು ನಡೆಸುತ್ತಿದ್ದ ಅವರನ್ನು ಒಬ್ಬ ಭಕ್ತರು, "ಹಿಮಾಲಯದಲ್ಲಿ ತಪಸ್ವಿಗಳಾಗಿ ಕಾಲ ಕಳೆದು ಬಂದ ಮೇಲೆ. ಆಗ ಇದ್ದ ಆನಂದ ಈಗ ನಿಮಗಿಲ್ಲ. ಈಗ ಸದಾ ಕೆಲಸ ಕಾರ್ಯಗಳಲ್ಲಿ ವ್ಯಸ್ತವಾಗಿರುತ್ತೀರಿ" ಎಂದರು. ಅದಕ್ಕೆ ಉತ್ತರವಾಗಿ ಸ್ವಾಮಿ ಅಖಂಡಾನಂದರು ಹೀಗೆ ಹೇಳಿದರು: "ನಿಜ, ನಾನು ಹಿಮಾಲಯದ ಸೌಂದರ್ಯವನ್ನು ಅನೇಕ ಬಾರಿ ಅನುಭವಿಸಿ ಅತ್ಯಂತ ಆನಂದದಿಂದ ಇದ್ದೆ. ಆದರೆ ನನ್ನ ಸಹೋದರರು ಇಷ್ಟು ಕಷ್ಟದಲ್ಲಿರುವುದನ್ನು ಕಂಡು ನನ್ನ ಆನಂದವೆಲ್ಲ ಓಡಿಹೋಯಿತು. ಅವರಿಗೆ ನಾನು ಸ್ವಲ್ಪ ಸಾಂತ್ವನ ಕೊಟ್ಟರೆ ಸಾಕು, ಆಗಲೇ ನನಗೆ ಆನಂದ."



ಅವರು ಹೇಳುತ್ತಿದ್ದರು: **"ಈ ಅನಾಥ ಬಾಲಕರು ಶ್ರೀರಾಮಕೃಷ್ಣರನ್ನು ಪೂಜಿಸಿ ಆನಂದಿಸಲಿ. ನಾನು ಈ ಬಾಲಕರನ್ನು ಪೂಜಿಸಿ ಆನಂದಿಸುತ್ತೇನೆ."** ದಿನವೆಲ್ಲ ಮಕ್ಕಳ ಸೇವೆಯನ್ನು ಮಾಡಿ, ರಾತ್ರಿ ಅವರೆಲ್ಲ ಮಲಗಿದ ಮೇಲೆ ಒಂದು ಗೋಡೆಗೆ ಒರಗಿಕೊಂಡು ವಿಶ್ರಮಿಸುತ್ತಿದ್ದ ಮಹಾಚೇತನ ಸ್ವಾಮಿ ಅಖಂಡಾನಂದಜಿ ಅವರು.

ಸ್ವಾಮಿ ಅಖಂಡಾನಂದರಲ್ಲಿ ಅದೆಂತಹ ಕರುಣೆ, ಸೇವಾ ಮನೋಭಾವ, ಶಿಶುವಿನಂಥ ಸರಳ ಸ್ವಭಾವ ಇತ್ತು ಎಂದರೆ, ಸ್ವಾಮಿ ವಿವೇಕಾನಂದರಂತೂ ಅವರ ಸೇವೆಯನ್ನು ಕೊಂಡಾಡಿ, 'ಆತನೊಬ್ಬ ಮಹಾವೀರ' ಎನ್ನುತ್ತಿದ್ದರು.

ಅತ್ಯಂತ ಸರಳರೂ, ನಿರಭಿಮಾನಿಗಳೂ, ಸೇವಾಧುರೀಣರೂ, ಕರುಣಾಪೂರಿತರೂ ಆದ ಸ್ವಾಮಿ ಅಖಂಡಾನಂದರು ೧೯೩೪ ರಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿ ನೇಮಕಗೊಂಡರು. ಪೂಜ್ಯ ಸ್ವಾಮಿ ವಿವೇಕಾನಂದರ ದಿವ್ಯವಾಣಿಯಾದ "ಯಾರು ಜೀವರನ್ನು ಪ್ರೀತಿಸುತ್ತಾರೋ ಅವರು ಭಗವಂತನನ್ನೇ ಸೇವಿಸುತ್ತಾರೆ" ಎಂಬ ಮಹಾಮಂತ್ರದ ಪ್ರತ್ಯಕ್ಷ ಸಾಕ್ಷಾತ್ಕಾರ ಪಡೆದ ಮಹಾನುಭಾವರಾಗಿದ್ದರು ಅವರು.

(ಮುಂದುವರಿಯುವುದು)